◆ **ನಿಮ್ಮದು 'ಬರಗೂರು' ಎಂಬ ಹಳ್ಳಿ. ಅದು ನಿಮ್ಮ ಹೆಸರಿನ ಜೊತೆ ಸೇರಿಬಿಟ್ಟಿದೆ. ಈಗ ಆ ಹಳ್ಳಿಯ ನೆನಪಾದಾಗ ಯಾವೆಲ್ಲ ಚಿತ್ರಗಳು ಕಣ್ಣಮುಂದೆ ಬರುತ್ತವೆ?**

ನನ್ನ ಹುಟ್ಟೂರು ಬರಗೂರು ನೆನಪಾದ ಕೂಡಲೇ ಬಾಲ್ಯದಿಂದ ಆರಂಭಿಸಿ ಇಡೀ ಬದುಕಿನ ರೂಪಕಗಳು ನೆನಪಾಗುವವು. ನಾನು ಹುಟ್ಟಿದ ಕುಟುಂಬಕ್ಕೆ ಸಾಮಾಜಿಕ ಮತ್ತು ಆರ್ಥಿಕ ಬಲಾಢ್ಯತೆ ಇರಲಿಲ್ಲ. ದೀಪಾವಳಿ ಹಬ್ಬ ಬಂತೆಂದರೆ ನನ್ನ ವಾರಿಗೆಯವರು ಪಟಾಕಿ ಹೊಡೆಯುವುದನ್ನು ನೋಡಿ ಒಳಗೇ ಕುಗ್ಗಿಹೋದ ಪ್ರಸಂಗಗಳೂ ಇವೆ. ಒಮ್ಮೆ ನನ್ನ ಅಣ್ಣ ಒಂದೂಕಾಲು ರೂಪಾಯಿಯ ಪಟಾಕಿ ತಂದಾಗ ನನಗಾದ ಸಂಭ್ರಮ ಅಷ್ಟಿಷ್ಟಲ್ಲ. ಇಲ್ಲಿ ಪಟಾಕಿಯ ಪ್ರಸಂಗ ಒಂದು ಪ್ರತೀಕ ಮಾತ್ರ. ಹಾಗೆಂದು ನನ್ನ ವಾರಿಗೆಯ ಶ್ರೀಮಂತ ಗೆಳೆಯರು ಎಂದೂ ನನ್ನನ್ನು ನಿರ್ಲಕ್ಷ್ಯ ಮಾಡಿರಲಿಲ್ಲ. ಅದಕ್ಕೆ ನಾನು ಶಿಕ್ಷಣದಲ್ಲಿ ಮುಂದಿದ್ದದ್ದು ಕೂಡ ಒಂದು ಮುಖ್ಯ ಕಾರಣವಾಗಿತ್ತು ಎನಿಸುತ್ತದೆ. ಅದು ನನ್ನ ಅಸ್ಮಿತೆ ಮತ್ತು ಆತ್ಮವಿಶ್ವಾಸದ ಫಲ. ನನ್ನನ್ನು ನನ್ನ ಊರಿನ ಜನ ಬೆರಗಾಗಿ ನೋಡಬೇಕಾದರೆ ನಾನು ವಿಭಿನ್ನವಾಗಿ, ವಿಶಿಷ್ಟವಾಗಿ ಬೆಳೆಯಬೇಕೆಂಬ ಹಂಬಲ ನನ್ನಲ್ಲಿತ್ತು. ಆಗ ನಾನು ಚೆನ್ನಾಗಿ ಓದುತ್ತ ಹೋದೆ. ಇವತ್ತು ತಮಾಷೆಯಂತೆ ಕಾಣುವ ಒಂದು ಪ್ರಸಂಗವೂ ಇದೆ. ನನಗೆ ಓದು ಚೆನ್ನಾಗಿ ಹತ್ತಿದೆ ಎಂದು ತೋರಿಸಿಕೊಳ್ಳಲು ರಾತ್ರಿ ಹೊತ್ತು ನಮ್ಮ ಮನೆಯ ಜಗಲಿ ಮೇಲೆ ಕೂತು ಬುಡ್ಡಿ ದೀಪದ ಬೆಳಕಲ್ಲಿ ಶಾಲೆಯ ಪಾಠಗಳನ್ನು ಗಟ್ಟಿಯಾಗಿ ಓದುತ್ತಿದ್ದೆ. ಇಡೀ ಕೇರಿಯಾಚೆಗೂ ಕೇಳಿಸಬೇಕು, ನಾನು ಓದಿನಲ್ಲಿ ಮುಂದು ಎಂದು ಅವರಿಗೆಲ್ಲ ಗೊತ್ತಾಗಬೇಕು ಅನ್ನೋ ಆಸೆ ನನ್ನದು. ಅನಂತರ ಯಾರಾದ್ರೂ 'ತುಂಬಾ ಚೆಂದಾಗ್ ಓದ್ತೀಯ ಕಣಪ್ಪ' ಅಂತ ಹೇಳಿದರೆ ನನ್ನ ಮನಸ್ಸು ಉಬ್ಬಿದಂತೆ ಸಂಭ್ರಮಿಸುತ್ತಿದ್ದೆ. ಇನ್ನೊಂದು ಪ್ರಸಂಗ ನೆನಪಿಗೆ ಬರುತ್ತೆ. ಆಗ ಹತ್ತನೇ ತರಗತಿಯ ಫಲಿತಾಂಶ ಪತ್ರಿಕೆಗಳಲ್ಲಿ ಬರುತ್ತಿತ್ತು. ನಮ್ಮೂರಿಗೆ ಬೆಳಗ್ಗೆ ಹತ್ತು ಗಂಟೆಯ ಬಸ್ಸಿಗೆ ಸಿರಾದಿಂದ ಒಂದೆರಡು ದಿನಪತ್ರಿಕೆಗಳು ಬರುತ್ತಿದ್ದವು. ಫಲಿತಾಂಶಕ್ಕಾಗಿ ಬಸ್ ಸ್ಟ್ಯಾಂಡಿನಲ್ಲಿ ಕಾದಿದ್ದ ನನಗೆ ಎದೆ ತುಂಬಾ ಢವಢವ! ಬಸ್ಸು ಬಂತು, ಪತ್ರಿಕೆಯೂ ಬಂತು. 'ಪಾಸ್' ಎಂಬ ವಿಭಾಗದಲ್ಲಿ ನನ್ನ ರಿಜಿಸ್ಟರ್ ನಂಬರಿಲ್ಲ. ತುಂಬಾ ನಿರಾಶೆಗೊಂಡೆ. ಅಳು ಬರೋ ಸಂದರ್ಭ. ಆಗ ಒಬ್ಬರು, 'ಇರಪ್ಪ ಬೇರೆ ವಿಭಾಗದಲ್ಲಿ ನೋಡೋಣ' ಎಂದು ಹುಡುಕಾಡತೊಡಗಿದರು. 'ಫಸ್ಟ್ ಕ್ಲಾಸ್' ವಿಭಾಗದಲ್ಲಿ ನನ್ನ ರಿಜಿಸ್ಟರ್ ನಂಬರ್ ಇತ್ತು. ಈಗಲೂ ನನಗೆ ಬೇರೆ ಯಾವ ತರಗತಿಯ ರಿಜಿಸ್ಟರ್ ನಂಬರ್ ನೆನಪಿಲ್ಲ. ಆದರೆ, ಎಸ್.ಎಸ್.ಎಲ್.ಸಿ. ನಂಬರ್ ಮಾತ್ರ ನೆನಪಿದೆ. ಅದು 15,395.

ಅನಂತರ ಪದವಿ ಪಾಸಾದೆ. ನಮ್ಮೂರಿಗೆ ಮೊದಲ ಎಂ.ಎ. ಪದವಿ ಪಡೆದವನು ಅನ್ನಿಸಿಕೊಂಡೆ. ಸಾಹಿತಿ, ಸಿನಿಮಾ ನಿರ್ದೇಶಕ ಎಂಬ ಹೆಸರೂ ಬಂತು. ಒಮ್ಮೆ ನನ್ನ ಮಗ ಚಿಕ್ಕವನಿದ್ದಾಗ ಆತನನ್ನು ಕರೆದುಕೊಂಡು ನಮ್ಮೂರಿಗೆ ಹೋಗಿದ್ದೆ. ಆತ ನಮ್ಮೂರಿನಲ್ಲಿ 'ಬರಗೂರು' ಎಂಬ ನಾಮಫಲಕ ಹಾಕಿದ್ದನ್ನು ನೋಡಿ ಏನು ಹೇಳಿದ ಗೊತ್ತೆ? 'ಅಪ್ಪ, ಇದ್ಯಾಕಪ್ಪ ಈ ಊರಿಗೆ ನಿನ್ನ ಹೆಸರು ಇಟ್ಟಿದ್ದಾರೆ?' ಅಂತ. ನನ್ನ ಮಗನ ಈ ಮುಗ್ಧ ಪ್ರಶ್ನೆಯಲ್ಲೇ ನನ್ನ ಬದುಕಿನ ಹಾದಿಯ ಉತ್ತರ ಇದೆ ಅನಿಸುತ್ತೆ.

◆ **ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣ ಪಡೆದದ್ದು ಎಲ್ಲಿ? ಸಾಹಿತ್ಯದ ಮೊದಲ ಪಾಠಗಳನ್ನು ಕಲಿತ ಆ ದಿನಗಳು ಹೇಗಿದ್ದವು?**

ನಾನು ಆರು ತಿಂಗಳು ಸಿರಾದಲ್ಲಿ, ಅನಂತರ ತುಮಕೂರಿನ ಪ್ರೌಢಶಾಲೆಯಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಮಾಡಿದೆ. ಕಾಲೇಜು ವಿದ್ಯಾಭ್ಯಾಸವೂ ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ. ಎಂ.ಎ. ಓದಿದ್ದು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ. ಬಾಡಿಗೆ ರೂಮಿನಲ್ಲಿ ಸ್ವಂತ ಅಡುಗೆ ಮಾಡಿಕೊಂಡು ವಿದ್ಯಾಭ್ಯಾಸವನ್ನು ಪೂರೈಸಿದವನು ನಾನು.